# ಆರೇನು ಮಾಡುವರು ಭುವನದೊಳಗೆ

**Note:** This is very much similar to "ArEna mADuvaru avaniyoLage - ಆರೇನು ಮಾಡುವರು ಅವನಿಯೊಳಗೆ." Small variations are there.

1. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao

2. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.

3. **Note:** The wordings are as per the book in Ref. 2 above. The song is not available for these lyrics. All the singers that I have checked have sung as per the song mentioned in the book in Ref 1 above. You may have to refer that song listed separately.

ರಾಗ: ನೀಲಾಂಬರಿ ತಾಳ: ಝಂಪೆ

ಆರೇನು ಮಾಡುವರು ಭುವನದೊಳಗೆ
ಪೂರ್ವ ಜನ್ಮದ ಕರ್ಮ ಪಣೆಯಲ್ಲಿ ಬರೆದುದಕೆ ॥ ಪ ॥

ಮಾಡಿದಡಿಗೆಯು ಕೆಡಲು ಮನೆಯ ಗಂಡನು ಬಿಡಲು
ಕೂಡಿ ಇದ್ದಾ ಸತಿಯು ಕುಣಿಸಾಡಲು
ಗೋಡೆಯಲಿ ಬರೆದ ಹುಲಿ ಘುಡುಘುಡಿಸಿ ತಿನಬರಲು
ಆಡದಂತಹ ಮಾತ ಅಖಿಳರೂ ನಿಜವೆನಲು ॥ 1 ॥

ಹೆತ್ತ ತಾಯ್ ಕರೆದು ಮಕ್ಕಳಿಗೆ ವಿಷ ಹಾಕಿದರೆ
ಮತ್ತೆ ತಂದೆಯು ಕರೆದು ಹೊರಗೆ ಮಾರಿದರೆ
ತೊತ್ತು ಅರಸಿಗೆ ಪ್ರತಿ ಉತ್ತರವ ನಡೆಸಿದರೆ
ಕತ್ತಲೆ ಕರಡಿಯಾಗಿ ಬೆನ್ನಟ್ಟಿ ಕಚ್ಚಿದರೆ ॥ 2 ॥

ಹೊಲ ಬೇಲಿ ಮೇದರೆ ಮೊಲ ಎದ್ದು ಇರಿದರೆ
ತಲೆಗೆ ತನ್ನಯ ಕೈಯ ಪೆಟ್ಟು ತಾಗಿದರೆ

ಹೆಳಲು ಹಾವಾದರೆ ಗೆಳೆಯ ರಿಪುವಾದರೆ
ಕಲಸಿದ್ದ ಅವಲಕ್ಕಿ ಕಳಪರಟಿ ನುಂಗಿದರೆ ॥ 3 ॥

ಕಣ್ಣೊಳಗಿನಾ ಬೊಂಬೆ ಕಚ್ಚಾಡ ಬಂದರೆ
ಹೆಣ್ಣಿನಾ ಹೋರಾಟ ಹೆಚ್ಚಾದರೆ
ಅನ್ನ ಉಣ್ಣದ ಮನುಜಗಜೀರ್ಣವಾದರೆ
ಪುಣ್ಯ ತೀರ್ಥಂಗಳಲಿ ಪಾಪ ಘಟಿಸಿದರೆ ॥ 4 ॥

ಏರಿ ಕುಳಿತ ಕುಂಬೆ ಎರಡಾಗಿ ಬಿಚ್ಚಿದರೆ
ವಾರಿನಿಧಿಗಳು ಉಕ್ಕಿ ಮೇರೆ ಮೀರಿದರೆ
ಆರಿದಾ ಇದ್ದಲಿಯು ಅಗ್ನಿಯಾಗುರಿದರೆ
ಧೀರ ಪುರಂದರ ವಿಠ್ಠಲನ ದಯವು ತಪ್ಪಿದರೆ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಮತ್ತೊಂದು ಆರ್ತಭಾವದ ಪದ. ಮೂರು ಬಗೆಯ ಕರ್ಮಗಳಲ್ಲಿ ಸಂಚಿತ ಕರ್ಮಗಳಲ್ಲಿಯ ಅನುಭವಿಸುವ ಭಾಗವು ಪ್ರಾರಬ್ಧ ಕರ್ಮ ಅಥವಾ ಪ್ರಾಚೀನ ಕರ್ಮ ಎನಿಸಿಕೊಳ್ಳುತ್ತದೆ. ಪ್ರಾಚೀನ ಕರ್ಮಾನುಭವವು ಯಾರನ್ನು ಬಿಡುವುದಿಲ್ಲವೆಂಬುದು ದಾಸರ ಅಭಿಮತ.

**ಗೋಡೆಗೆ ಬರೆದ ಹುಲಿ...** – ಗೋಡೆಯ ಮೇಲೆ ಬರೆದ ಹುಲಿಯ ಚಿತ್ರವೇ ಪ್ರಾಣವನ್ನು ಪಡೆದು ತನ್ನನ್ನು ತಿನ್ನಬರುವುದಾದರೆ.

**ಆಡಿದ ಮಾತುಗಳ...** – ತಾವು ಆಡದಿದ್ದ ಮಾತುಗಳನ್ನೂ ಆಡಿದರೆಂದು ಎಲ್ಲರೂ ಸಾಧಿಸುವುದಾದರೆ.

**ಮೊಲವೆದ್ದು ಇರಿದರೆ** – ಸಾಧು ಪ್ರಾಣಿಯೂ, ಅಂಜಿಕೆಯ ಸ್ವಭಾವದ್ದೂ ಆದ ಮೊಲ ಕ್ರೂರಿಯಾಗಿ ತನ್ನ ಮುಸುಡಿಯಿಂದ ತಿವಿಯಲು ಬರುವುದಾದರೆ.

**ಹೆಳಲು** – ಹಿಣಿಲ್, ಹೆರಳು; ತಲೆಗೂದಲನ್ನು ಹೆಣೆದು ಓರಣ ಮಾಡಿದ ಜಡೆ.

**ರಿಪು** = ಶತ್ರು

**ಕಲಪರಟಿ** – ಕಲ್ಲಿನ ಪಾತ್ರೆ, ಗಡಿಗೆ.

**ತೊತ್ತು** – ದಾಸಿ, ಕೆಲಸದವಳು.

**ಪಣೆ** = ಹಣೆ

**ಕುಂಬೆ** = ಗೋಡೆ

**ವಿ. ಸೂ. -** ಪ್ರಾಚೀನ ಕರ್ಮವು ಜೀವನದಲ್ಲಿ ಅಕಲ್ಪಿತವಾದ ಅನೇಕ ಆಪತ್ತುಗಳನ್ನು ತಂದೊಡ್ಡುತ್ತಿರುವುದು.

**Classification:** Keerthane
**Ankita:** dhira purandara vittala
**Location:** NA
**Category:** Jeevana Darshana, Virakti
**Sub-Category:** karma, bhumi, patni, pati, punya, papa, janma, tayi, tande, tirtha, agni, kannu, avalakki, makkalu, visha, anna,
**Pravachana:** NA